ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಸಲಹೆಯ ಬಗ್ಗೆ ನಮ್ಮ ಇಲಾಖೆಯ ಹಣಕಾಸು, ಮತ್ತು ಸರ್ಕಾರದ ಹಣಕಾಸಿನ ಇತಿಮಿತಿಯ ಹಿನ್ನೆಲೆಯಲ್ಲಿ ತಾವು ಹೇಳಿದ ಹಾಗೆ ಖಾಸಗಿ ಕ್ಷೇತ್ರದಲ್ಲಿ ಸಹಿತ ಬಿಒಒಟಿ ಬಿಸಿಸ್ ಮೇಲೆ ಟೋಲ್ ಅನ್ನು ಹಾಕಿ, ಮಾಡುವುದಕ್ಕೆ ಆಗುತ್ತದಾ ಎಂಬುದು ತಮ್ಮ ಸಲಹೆ. ನಾವು ಅದನ್ನೂ ಸಹಿತ ಪರಿಶೀಲನೆಯನ್ನು ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೇ, ಈ ರೀತಿಯ ಬ್ರಿಡ್ಜ್‌ಗಳು ಇದು ಒಂದೇ ಅಲ್ಲ, ರಾಜ್ಯವ್ಯಾಪ್ತಿ ಇದೆ. ಇದು ಇದಕ್ಕೆ ಸಂಬಂಧಪಟ್ಟದ್ದು.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಬೇಕು.

ಮಾಲೂರು ತಾಲ್ಲೂಕಿನಲ್ಲಿರುವ ಅನಧಿಕೃತ ಮದ್ಯದಂಗಡಿಗಳ ಬಗ್ಗೆ

621(6424) ಶ್ರೀ ಕೃಷ್ಣಯ್ಯ ಶೆಟ್ಟಿ ಎಸ್.ಎಸ್. (ಮಾಲೂರು) : ಮಾನ್ಯ ಉಪ ಮುಖ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನಲ್ಲಿ ಎಷ್ಟು ಸಿವಿಲ್–1 (ವೈನ್‌ಶಾಪ್) ಮತ್ತು ಸಿಎಲ್–2 (ಬಾರ್ ಅಂಡ್ ರೆಸ್ಟೋರೆಂಟ್) ಪರವಾನಿಗೆಗಳನ್ನು ನೀಡಲಾಗಿದೆ;

ಆ) ಬಹಳಷ್ಟು ಜನರು ಸಿಎಲ್–1 ಪರವಾನಿಗೆ ಪಡೆದು ಸಿಎಲ್–2 ಪರವಾನಿಗೆಯ ಸೌಲಭ್ಯವನ್ನು ಅಳವಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕೈಗೊಂಡ ಕ್ರಮವೇನು;

ಇ) ಮಾಲೂರು ತಾಲ್ಲೂಕಿನಲ್ಲಿರುವ ಸಾರಾಯಿ ಅಂಗಡಿಗಳು ಎಷ್ಟು; ಇದರಲ್ಲಿ ಅಧಿಕೃತ ಹಾಗೂ ಅನಧಿಕೃತ ಅಂಗಡಿಗಳು ಎಷ್ಟು ;

ಈ) ಇಲ್ಲಿ ಅಧಿಕೃತ ಅಂಗಡಿಗಳಿಗಿಂತ ಅನಧಿಕೃತ ಅಂಗಡಿಗಳು ಹೆಚ್ಚಿನ ಸಂಖ್ಯೆಯಲ್ಲಿರುವುದ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;

ಉ) ಹರಿಜನ ಕಾಲೋನಿಗಳಲ್ಲಿಯೇ ಹೆಚ್ಚಿನ ಸಂಖ್ಯೆಯಲ್ಲಿ ಸಾರಾಯಿ ಅಂಗಡಿಗಳನ್ನು ಪ್ರಾರಂಭಿಸಲು ಪರವಾನಿಗೆ ನೀಡಲಾಗಿದೆಯೇ ;

ಊ) ಹಾಗಿದ್ದಲ್ಲಿ, ಇದನ್ನು ತಪ್ಪಿಸಲು ಸರ್ಕಾರವು ಕ್ರಮವೇನಾದರೂ ಕೈಗೊಂಡಿದೆಯೇ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) 2005–06ನೇ ಸಾಲಿನಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿಗೆ 13 ಸಿಎಲ್–2 (ಚಿಲ್ಲರೆ ಮದ್ಯದಂಗಡಿ) 11 ಸಿಎಲ್–9 (ಬಾರ್ ಅಂಡ್ ರೆಸ್ಟೋರೆಂಟ್) ಸನ್ನದುಗಳನ್ನು ನವೀಕರಿಸಿ ನೀಡಲಾಗಿದೆ. ಈ ತಾಲ್ಲೂಕಿನಲ್ಲಿ ಯಾವುದೇ ಸಿಎಲ್–1 ಸನ್ನದುಗಳು ಇರುವುದಿಲ್ಲ.

ಆ) ಸಿಎಲ್–1 ಸನ್ನದು ಪಡೆದು ಸಿಎಲ್–2 ಸೌಲಭ್ಯವನ್ನು ಅಳವಡಿಸಿಕೊಳ್ಳಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ. ಈ ತೆರನಾದ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ. ಒಂದು ವೇಳೆ ಕಂಡುಬಂದಲ್ಲಿ ಸನ್ನದು ಷರತ್ತುಗಳ ಉಲ್ಲಂಘನೆಗಾಗಿ ಸನ್ನದುದಾರರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.

ಇ) ಮಾಲೂರು ತಾಲ್ಲೂಕಿನಲ್ಲಿ 89 ಅಧಿಕೃತ ಸಾರಾಯಿ ಅಂಗಡಿಗಳು ಇರುತ್ತವೆ. ಯಾವುದೇ ಅನಧಿಕೃತ ಸಾರಾಯಿ ಅಂಗಡಿಗಳು ಇರುವುದಿಲ್ಲ.

ಈ) ಇಲ್ಲ. ಅನಧಿಕೃತ ಅಂಗಡಿಗಳು ಕಂಡುಬಂದಲ್ಲಿ ಅಂತಹ ಅಂಗಡಿಗಳು ವಿರುದ್ಧ ಮೊಕದ್ದಮೆ ಹೂಡಲಾಗುವುದು ಮತ್ತು ಅಂತಹ ಅಂಗಡಿಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲಾಗುವುದು. 2004–05ನೇ ಸಾಲಿನಲ್ಲಿ ಅನಧಿಕೃತ ಸಾರಾಯಿ ಅಂಗಡಿಗಳ ವಿರುದ್ಧ 5 ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ.

ಊ) ಇಲ್ಲ.

ಋ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್.ಎಸ್. ಕೃಷ್ಣಯ್ಯಶೆಟ್ಟಿ : ಮಾನ್ಯ ಅಧ್ಯಕ್ಷರೇ, ತಾವು ನನಗೆ ಪ್ರಶ್ನೆಯನ್ನು ಕೇಳಲು ಅವಕಾಶವನ್ನು ಮಾಡಿಕೊಟ್ಟಂತಹ ತಮಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ನನಗೆ ಉತ್ತರ ಕೊಟ್ಟಿದ್ದಾರೆ. ಆದರೆ ವಾಸ್ತವಾಂಶ ಅಲ್ಲಿನ ಮಳಿಗೆಗಳಿಗೆ ಸಿಎಲ್-2 ಮತ್ತು ಸಿಎಲ್-9, ಎಂದು ಲೈಸನ್ಸ್ ಅನ್ನು ಎಕ್ಸೈಜ್ ಡಿಪಾರ್ಟ್‌ಮೆಂಟ್ ಏನು ಕೊಟ್ಟಿದ್ದಾರೆ? ಆ ಸಿಎಲ್-2 ನಲ್ಲಿ ಕೇವಲ ಇದು ಲಿಕ್ಕರ್ ಅನ್ನು ಮಾರುವುದಕ್ಕೆ ಪರ್ಮಿಷನ್ ಇದೆ. ಆದರೆ ಪಕ್ಕದಲ್ಲೇ ಹೋಟೆಲ್‌ಗಳನ್ನು ಮಾಡಿ, ಅಲ್ಲಿ ಲಿಕ್ಕರ್ ಅನ್ನು ಮಾರುವ ಕೆಲಸವನ್ನು ಮಾಡುತ್ತಿದ್ದಾರೆ. ಅದು ಮಾಡುತ್ತಿದ್ದರೂ ಇವರು ಕೊಟ್ಟಿರುವಂತಹ ಉತ್ತರದಲ್ಲಿ ಯಾವುದೇ ರೀತಿಯಲ್ಲಿ ಕಾನೂನಿಗೆ ವಿರುದ್ಧವಾಗಿ ಮಾಡಿಲ್ಲವೆಂದು ವರದಿಯನ್ನು ಕೊಟ್ಟಿದ್ದಾರೆ. ಅದೇ ಅಧಿಕಾರಿಗಳು ನಿನ್ನೆ ದಿವಸ ಹೋಗಿ ನಿಮ್ಮ ಶಾಸಕರು ಈ ಪ್ರಶ್ನೆಯನ್ನು ಕೇಳುವುದರಿಂದ ಸಿಎಲ್ -2 ಲೈಸನ್ಸ್ ತೆಗೆದುಕೊಂಡಿರುವ ಅಂಗಡಿಗಳ ಪಕ್ಕದಲ್ಲಿರುವಂತಹ ಹೋಟೆಲ್‌ಗಳನ್ನು ಬಂದ್ ಮಾಡಿದ್ದಾರೆ. ಆದರೆ. ಆ ರೀತಿ ನಡೆದಿಲ್ಲ ಎಂದು ಇಲ್ಲಿ ಮಾಹಿತಿ ಕೊಟ್ಟಿದ್ದಾರೆ. ಅಲ್ಲಿ ನಿನ್ನೆ ನಡೆದಿರುವ ವಾಸ್ತವಾಂಶವೆಂದರೆ, ಅರೆ ಲಿಕ್ಕರ್ ಮಾರುತ್ತಿದ್ದಂಥ ಹೋಟೆಲ್‌ಗಳನ್ನು ಬಂದ್ ಮಾಡಿದ್ದಾರೆ. ಈ ರೀತಿಯ ಕ್ರಮವನ್ನು ಏಕೆ ತೆಗೆದುಕೊಂಡರು ಎಂದು ಸನ್ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರು ಪ್ರಶ್ನೆಯನ್ನು ಕೇಳುವಾಗ ಸಿಎಲ್-1 ಮತ್ತು ಸಿಎಲ್-9ಗೆ ಸಂಬಂಧಪಟ್ಟಂತೆ ಮಾತ್ರ ಪ್ರಶ್ನೆ ಕೇಳಿದ್ದಾರೆ. ಸಿಎಲ್-1 ಎಂದರೆ ಹೋಲ್‌ಸೆಲ್ ವೈನ್ ಶಾಪ್‌ಗಳಾಗುತ್ತವೆ. ಸಿಎಲ್-9 ಬಾರ ಅಂಡ್ ರೆಸ್ಟೋರೆಂಟ್‌ಗಳಾಗುತ್ತದೆ. ಅದರಲ್ಲಿ ಮಿಸ್‌ಯೂಸ್ ಮಾಡಿಕೊಳ್ಳತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ತಾವು ಕೇಳುತ್ತಿರತಕ್ಕಂಥ ಪ್ರಶ್ನೆ ಏನೆಂದರೆ, ವೈನ್ ಶಾಪ್‌ಗಳಲ್ಲಿ ಚಿಲ್ಲರೆಯಾಗಿ ಮಾರಾಟ ಮಾಡುತ್ತಿದ್ದಾರೆ ಎನ್ನುವ ಪ್ರಶ್ನೆಯನ್ನು ತಾವು ಕೇಳಿದ್ದೀರಿ, ಹೌದಲ್ಲವೇ?

ಶ್ರೀ ಎಸ್.ಎಸ್. ಕೃಷ್ಣಯ್ಯಶೆಟ್ಟಿ : ಸಿಎಲ್-2 ಲೈಸ್‌ನ್ಸ್ ತೆಗೆದುಕೊಂಡು, ಅವುಗಳ ಪಕ್ಕದಲ್ಲೇ ಒಂದು ಹೋಟೆಲ್‌ನ್ನು ಓಪನ್ ಮಾಡಿ ಸಿಎಲ್-9ಅನ್ನು ಕೂಡ ಅಲ್ಲಿ ಬಳಸುತ್ತಿದ್ದಾರೆ. ಅದಕ್ಕೆ ಯಾವುದೇ ಪರವಾನಗಿ ಪಡೆದುಕೊಂಡಿಲ್ಲ. ನಾನು ಈ ಪ್ರಶ್ನೆಯನ್ನು ಹಾಕಿದ್ದೇನೆ ಎಂದು ತಿಳಿದ ಮೇಲೆ, ನಿನ್ನೆಯ ದಿವಸ ಎಕ್ಸೈಸ್ ಡಿಪಾರ್ಟ್‌ಮೆಂಟಿನವರು ಅಲ್ಲಿಗೆ ಹೋಗಿ ಸಿಎಲ್-2 ಲೈಸ್‌ನ್ಸ್ ತೆಗೆದುಕೊಂಡಿರುವ ಅಂಗಡಿಗಳ ಪಕ್ಕದಲ್ಲಿರುವ ಹೋಟೆಲ್‌ಗಳನ್ನು ಬಂದ್ ಮಾಡಿದ್ದಾರೆ. ತಾವು ಮಾಹಿತಿ ತರಿಸಿಕೊಂಡು ಪರಿಶೀಲನೆ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಗೌರವಾನ್ವಿತ ಸದಸ್ಯರುಗಳು ಈ ಪ್ರಶ್ನೆಯನ್ನು ಕೇಳಿದ್ದಾರೆ. ಎನ್ನುವ ಕಾರಣಕ್ಕೆ ಅಧಿಕಾರಿಗಳು ಅಲ್ಲಿಗೆ ಹೋಗಿ ಬಂದ್ ಮಾಡಿರಲಿಕ್ಕೆ ಸಾಧ್ಯವಿಲ್ಲ. ಒಂದು ಪಕ್ಷ, ತಾವು ಹೇಳಿದಂತೆ, ಹಾಗೇನಾದರೂ ಕಾನೂನನ್ನು ಬಿಟ್ಟು ತಪ್ಪನ್ನು ಮಾಡಿದ್ದರೆ, ಖಂಡಿತವಾಗಿಯೂ ಸಹ ನಾವು ಅದನ್ನು ಪರಿಶೀಲನೆ ಮಾಡಿ, ಅದನ್ನು ಸರಿಪಡಿಸುತ್ತೇವೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಆದರೆ ಯಾವುದೇ ಕಾರಣಕ್ಕೂ ಸಹ, ಈ ಅಂಗಡಿಗಳಲ್ಲಿ ಅವ್ಯವಹಾರಗಳನ್ನು ನಡೆಸಲು ಬಿಡುವುದಿಲ್ಲ ಎನ್ನುವುದು ತಮಗೆ ಗೊತ್ತಿದೆ.

ಶ್ರೀ ಎಸ್.ಎಸ್. ಕೃಷ್ಣಯ್ಯಶೆಟ್ಟಿ : ನಾವು ಸತತವಾಗಿ ಒಂದು ವರ್ಷದಿಂದ ಈ ಬಗ್ಗೆ ಹೇಳುತ್ತಿದ್ದು, ಕೋಲಾರದ ಡೆಪ್ಯುಟಿ ಕಮೀಷನರ್, ಎಕ್ಸೈಸ್ ಡಿ ಸಿ ಮತ್ತು ಕಮೀಷನರ್‌ರವರಿಗೆ

ಲಿಖಿತಮೂಲಕ ಲೆಟರ್ ಕೊಟ್ಟರೂ ಅವರು ಅದನ್ನು ನಿಲ್ಲಿಸಲಿಲ್ಲ. ಆದರೆ, ಈ ಬಗ್ಗೆ ನಾನು ವಿಧಾನಸಭೇಯಲ್ಲಿ ಪ್ರಶ್ನೆ ಹಾಕಿದ ಮೇಲೆ, ಅವರು ಅದನ್ನು ನಿಲ್ಲಿಸಿದ್ದಾರೆ ಎನ್ನುವ ಮಾಹಿತಿಯನ್ನು ನಾನು ಈ ಸಂದರ್ಭದಲ್ಲಿ ಕೊಡಲು ಇಚ್ಛಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸದಸ್ಯರು ಪ್ರಶ್ನೆ ಹಾಕಿರುವುದರಿಂದ ಕ್ರಮ ತೆಗೆದುಕೊಂಡಿದ್ದಾರೆ ಎನ್ನುವ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ. ಮಾನ್ಯ ಸದಸ್ಯರು ಎಕ್ಸೈಸ್ ಕಮೀಷನರ್‌ರವರಿಗೆ ಕೊಟ್ಟಿರತಕ್ಕಂಥ ಪತ್ರದ ಹಿನ್ನೆಲೆಯಲ್ಲಿ ಮಾಡಿದ್ದಾರೆ. ಇವರ ಎರಡನೇ ಪ್ರಶ್ನೆ ಇರತಕ್ಕಂಥಾದ್ದು, ಅಕ್ರಮವಾಗಿ ಸಾರಾಯಿ ಅಂಗಡಿಗಳನ್ನು ಓಪನ್ ಮಾಡಿದ್ದಾರೆ ಎನ್ನುವುದಾಗಿದ್ದು, ಅದರ ಬಗ್ಗೆ ಈ ಹಿಂದೆಯೇ ಕ್ರಮ ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಹೇಳಬೇಕೆಂದರೆ, 2004ರ ನವೆಂಬರ್‌ನಲ್ಲಿ ಡಿಸೆಂಬರ್‌ನಲ್ಲಿ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಆದ್ದರಿಂದ, ಅಕ್ರಮ ಸಾರಾಯಿ ಅಂಗಡಿಗಳ ವಿಚಾರದಲ್ಲಿ ಕ್ರಮ ತೆಗೆದುಕೊಂಡಿರುವುದು ಈಗಲ್ಲ, ಈ ಹಿಂದೆಯೇ ತೆಗೆದುಕೊಳ್ಳಲಾಗಿದೆ. ತಾವು ಸಿಎಲ್-2, ಸಿಎಲ್-9 ಮತ್ತು ಸಿಎಲ್-1 ಇವುಗಳ ಬಗ್ಗೆ ಏನು ಹೇಳಿದ್ದೀರಿ, ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್.ಎಸ್. ಕೃಷ್ಣಯ್ಯ ಶೆಟ್ಟಿ : ನಿನ್ನೆಯವರೆಗೂ ಅವರು ಅವುಗಳನ್ನು ಬಂದ್ ಮಾಡಿರಲಿಲ್ಲ. ನಿನ್ನೆಯೇ ಅವುಗಳನ್ನು ಮುಚ್ಚುವಂಥ ಪ್ರಮೇಯ ಏಕೆ ಬಂತು? ಅಲ್ಲಿ 65 ಸಾರಾಯಿ ಅಂಗಡಿಗಳಿಗೆ ಪರವಾನಗಿ ಕೊಟ್ಟಿದ್ದಾರೆ. ಆದರೆ ಅಲ್ಲಿ ಸುಮಾರು 490 ಅಂಗಡಿಗಳನ್ನು ತೆರೆದಿದ್ದಾರೆ. ಅಲ್ಲದೇ, ಹರಿಜನರ ಕಾಲೋನಿಗಳಲ್ಲೂ ಸಹ ಅಂಗಡಿಗಳು ರಾರಾಜಿಸುತ್ತಿವೆ ಮತ್ತು ನಮ್ಮ ತಾಲ್ಲೂಕಿನ ಸುತ್ತಮುತ್ತಲಿರು ಬಯಲುನರಸಾಪುರ, ಕಟ್ಟಿಗೇನಹಳ್ಳಿ ಮತ್ತು ಬೇಡಮಲ್ಲಸಂದ್ರ ಈ 2-3 ಗಡಿಭಾಗಗಳಲ್ಲಿರುವ ಹಳ್ಳಿಗಳಿಂದ ಹೇರಳವಾಗಿ ಭಟ್ಟಿ ಸಾರಾಯಿ ಬರುತ್ತಿದೆ. ಅದನ್ನೂ ಕೂಡ ತಡೆಗಟ್ಟಲು ಸರಿಯಾದ ರೀತಿಯಲ್ಲಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಕಡೆಗಳಲ್ಲಿ ಜನರು ಭಟ್ಟಿ ಸಾರಾಯಿ ಮತ್ತು ಕಳಪೆ ಮದ್ಯವನ್ನು ಕುಡಿದು ಸಾಯುತ್ತಿರುವಂಥ ಪ್ರಸಂಗಗಳು ನಡೆಯುತ್ತಲೇ ಇವೆ. ಅಂಥ ಒಂದು ಪ್ರಸಂಗ ನಮ್ಮ ತಾಲ್ಲೂಕಿಗೂ ಬರುವ ಪ್ರಮೇಯವೂ ಇದೆ. ಇನ್ನೊಂದು ವಿಷಯವೆಂದರೆ, ನಮ್ಮ ತಾಲ್ಲೂಕಿನಲ್ಲಿರು ಇನ್ಸ್‌ಪೆಕ್ಟರ್ ನಾಲ್ಕು ತಾಲ್ಲೂಕುಗಳಿಗೆ ಇನ್ಸ್‌ಪೆಕ್ಟರ್ ಆಗಿದ್ದಾರೆ. ಹಾಗಾಗಿ ಅವರು ಇಲ್ಲಿ ನೋಡಲೂ ಆಗುವುದಿಲ್ಲ. ಅಲ್ಲಿ ನೋಡಲೂ ಆಗುವುದಿಲ್ಲ. ಆದ್ದರಿಂದ, ಅಲ್ಲಿಗೆ ಒಬ್ಬರು ಇನ್ಸ್‌ಪೆಕ್ಟರನ್ನು ಹಾಕಿ ಎಂದು ಒಂದು ವರ್ಷದಿಂದ ಸರ್ಕಾರವನ್ನು ರಿಕ್ವಸ್ಟ್ ಮಾಡುತ್ತಿದ್ದರೂ ಹಾಕಿಲ್ಲ. ಯಾವ ಕಾರಣದಿಂದ ಅವರನ್ನು ಅಪಾಯಿಂಟ್ ಮಾಡುತ್ತಿಲ್ಲವೊ ಗೊತ್ತಿಲ್ಲ. 65 ಅಂಗಡಿಗಳಿಗೆ ಲೈಸ್‌ನ್ಸ್ ಇರುವಂಥ ತಾಲ್ಲೂಕಿನಲ್ಲಿ ಸುಮಾರು 450 ರಿಂದ 490 ಅಂಗಡಿಗಳಿವೆ. ಅದರ ಬಗ್ಗೆ ಬೇಕಾದರೆ ತಾವು ಇಂಟ್‌ಲಿಜೆನ್ಸ್ ರಿಪೋರ್ಟ್ ತರಿಸಿಕೊಳ್ಳಿ. ಆದರೆ, ತಮ್ಮ ಇಂಟ್‌ಲೆಜೆನ್ಸ್ ಯವರು ಅಲ್ಲಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ನಾವು ಈ ಬಗ್ಗೆ ಕೇಳಿದಾಗಲೆಲ್ಲಾ. ನಮಗೆ ಏನಾದರೊಂದು ಸಬೂಬು ಹೇಳಿ, ಅವುಗಳನ್ನು ಮುಚ್ಚಿಸುತ್ತೇವೆ. ಎಂದು ಹೇಳುತ್ತಾರೆ. ನಾನು ಬಹಳ ಗಲಾಟೆ ಮಾಡಿದ ಮೇಲೆ 4-5 ಅಂಗಡಿಗಳನ್ನು ಮುಚ್ಚಿಸಿಬಿಟ್ಟು, ನಂತರ ಅದೇ ಅಂಗಡಿಯವರನ್ನು ನಮ್ಮ ಮೇಲೆ ಎತ್ತಿಕಟ್ಟುತ್ತಾರೆ. ಶಾಸಕರು ಹೇಳಿದ್ದರಿಂದ ಮುಚ್ಚಿಸಿದ್ದೇವೆ ಎಂದು ಅವರಿಗೆ ಹೇಳಿ, ಲೋಕಲ್‌ನಲ್ಲಿ ನಮ್ಮ ಮೇಲೆ ಗಲಾಟೆ ಮಾಡಲು ಅದೇ ಅಧಿಕಾರಿಗಳು ಅವರನ್ನು ಬಿಡುತ್ತಿದ್ದಾರೆ. ದಯವಿಟ್ಟು ಇದರ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕು. ಸುಮಾರು 490 ಅಕ್ರಮ ಅಂಗಡಿಗಳಿವೆ. ಹರಿಜನ ಕಾಲೋನಿಯಲ್ಲೇ ಸುಮಾರು ನೂರು ಅಂಗಡಿಗಳಿವೆ.

ನಮಗೆ ಬಹಳ ನೋವಾಗುತ್ತದೆ. ಅನೇಕ ಮಹಿಳಾ ಸಂಘಗಳು ಪ್ರತಿಸಾರಿಯೂ ನನ್ನ ಜೊತೆಗೆ ಬಂದು ಈ ಬಗ್ಗೆ ಗಲಾಟೆ ಮಾಡುತ್ತಾರೆ. ಆದ್ದರಿಂದ, ಇಲ್ಲೀಗಲ್ ಶಾಪ್‌ಗಳನ್ನು ತಕ್ಷಣ ನಿಲ್ಲಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ ಕಾರಜೋಳ : ಮಾನ್ಯ ಅಧ್ಯಕ್ಷರೇ, ನಾನೊಂದು ಉಪ ಪ್ರಶ್ನೆ ಕೇಳುತ್ತೇನೆ. ಶಾಲಾಕಾಲೇಜುಗಳ ಹತ್ತಿರ, ದೇವಸ್ಥಾನಗಳ ಹತ್ತಿರ ಮತ್ತು ಪರಿಶಿಷ್ಟ ಜಾತಿ, ಜನಾಂಗಗಳವರಿರುವ ಕೇರಿಗಳಲ್ಲಿ ಸಾರಾಯಿ ಅಂಗಡಿಗಳನ್ನು ತೆಗೆಯಬಾರದು ಎಂದು ಸರ್ಕಾರದ ಆದೇಶವಿದೆ. ಆದರೆ ಇವತ್ತು ರಾಜ್ಯದಲ್ಲಿ ಏನಾಗಿದೆ ಎಂದರೆ, ಅಬಕಾರಿ ಇಲಾಖೆಯ ಅಧಿಕಾರಿಗಳು ರೇಟ್ ಫಿಕ್ಸ್ ಮಾಡಿಕೊಂಡಿದ್ದಾರೆ. ಸಾರಾಯಿ ಅಂಗಡಿಗೆ 500, 1000, 1500, 2000 ರೂಪಾಯಿಗಳು ಎಂದು ಫಿಕ್ಸ್ ಮಾಡಿಕೊಂಡಿದ್ದಾರೆ. ಎಕ್ಸೈಸ್ ಡೆಪ್ಯುಟಿ ಕಮೀಷನರಿಂದ ಹಿಡಿದು ಗಾರ್ಡ್‌ವರೆಗೂ ಮಂತ್ಲಿ, ಮಾಮೂಲಿ ಫಿಕ್ಸ್ ಆಗಿರುತ್ತದೆ. ಹಾಗಾಗಿ ಅವರು ಹರಿಜನ ಕೇರಿಯನ್ನೂ ನೋಡುವುದಿಲ್ಲ. ದೇವಸ್ಥಾನವನ್ನೂ ನೋಡುವುದಿಲ್ಲ. ಶಾಲಾ ಕಾಲೇಜುಗಳನ್ನು ನೋಡುವುದಿಲ್ಲ ಎಲ್ಲಾ ಕಡೆಯೂ ಸಾರಾಯಿ ಅಂಗಡಿಗಳನ್ನು ಇಡಲು ಪರವಾನಗಿ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ, ಪರಿಶಿಷ್ಟ ಜಾತಿ ಜನಾಂಗದ ಹೆಣ್ಣುಮಕ್ಕಳು, ನಮ್ಮ ಊರಿನಲ್ಲಿ ಸಾರಾಯಿ ಅಂಗಡಿಗಳನ್ನು ತೆರೆಯಬಾರದು ಎಂದು ಹೋರಾಟ ಮಾಡಿದರೂ, ಅವರನ್ನು ತಮ್ಮ ಕಸ್ಟಡಿಗೆ ತೆಗೆದುಕೊಂಡು, ಅವರನ್ನು ಬಡಿದು, ಅಲ್ಲಿ ಅಂಗಡಿಗಳನ್ನು ಓಪನ್ ಮಾಡಿದ್ದಾರೆ. ಇಂಥ ಒಂದು ಪರಿಸ್ಥಿತಿ ಇದೆ. ಅದಕ್ಕಾಗಿ, ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ. ಕೂಡಲೇ ಒಂದು ಸ್ಪೆಷಲ್ ಸ್ಕ್ವಾಡ್‌ಅನ್ನು ನೇಮಿಸಿ, ಇಡೀ ರಾಜ್ಯದಲ್ಲಿ ದೇವಸ್ಥಾನಗಳು, ಹರಿಜನ ಕೇರಿಗಳು, ಹೈಸ್ಕೂಲುಗಳು ಮತ್ತು ಶಾಲಾ ಕಾಲೇಜುಗಳ ಪಕ್ಕದಲ್ಲಿರುವ ಅಂಗಡಿಗಳನ್ನು ತೆಗೆಸಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಒಂದೇ ಒಂದು ಉಪಪ್ರಶ್ನೆಯನ್ನು ಕೇಳುತ್ತೇನೆ. ನನಗೆ ಎಕ್ಸೈಸ್‌ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ರಾಜ್ಯದಲ್ಲಿ 100 ಎಂ ಎಲ್ ಶರಾಬನ್ನು ಮಾರಾಟ ಮಾಡುವಂಥ ಬೆಲೆಯನ್ನು ಹನ್ನೊಂದೂವರೆ ರೂಪಾಯಿ ಎಂದು ನಿಗದಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ, ನಮ್ಮ ಕಡೆ ಎಲ್ಲಾ ಅಂಗಡಿಗಳಲ್ಲೂ 12 ರೂಪಾಯಿ ಎಂದು ಬೋರ್ಡ್ ಹಾಕಿದ್ದಾರೆ. ಹಾಗಾದರೆ, 100 ಎಂ ಎಲ್ ಸ್ಯಾಚೆಟ್ ಮೇಲೆ 50 ಪೈಸೆ ಜಾಸ್ತಿ ತೆಗೆದುಕೊಳ್ಳುವುದು ಅಕ್ರಮ ಎಂದು ನಿಮ್ಮ ಇಲಾಖೆಗೆ ಅನ್ನಿಸುತ್ತದೆಯೇ? ಪ್ರತಿಯೊಂದು ಸ್ಯಾಚೆಟ್ ಮಾರುವಾಗಲೂ 50 ಪೈಸೆ ಜಾಸ್ತಿ ತೆಗೆದುಕೊಳ್ಳುತ್ತಾರೆಂದರೆ, ನನ್ನ ತಾಲ್ಲೂಕಿನಲ್ಲಿ ಪ್ರತಿನಿತ್ಯ ಅವರೇಜ್ 10 ಸಾವಿರ ಪ್ಯಾಕೆಟ್‌ಗಳು ಮಾರಾಟವಾಗುತ್ತವೆ. ಇದರಿಂದ ಅವರಿಗೆ ಎಷ್ಟು ಲಾಭವಾಗುತ್ತದೆ? ಅವರು ತಮ್ಮ ಮನಬಂದಂತೆ ಮಾರಬಹುದೇ? ಅದರ ಮೇಲೇನಾದರೂ ಇಲಾಖೆಯ ನಿಯಂತ್ರಣ ಉಂಟೇ? ಸರ್ಕಾರ ನಿಗದಿಪಡಿಸಿರತಕ್ಕಂಥ ದರಕ್ಕೆ ಮಾತ್ರ ಮಾರಾಟ ಮಾಡಬೇಕು. ಅದಕ್ಕಿಂತ ಜಾಸ್ತಿ ದರಕ್ಕೆ ಮಾರಾಟ ಮಾಡಿದಂಥವರ ಮೇಲೆ ಕಾನೂನು ಕ್ರಮವನ್ನೇನಾದರೂ ತೆಗೆದುಕೊಳ್ಳುವಿರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣಯ್ಯಶೆಟ್ಟಿಯವರು ಕೇಳಿರತಕ್ಕಂಥ ಪ್ರಶ್ನೆಗೆ, ಈಗಾಗಲೇ ನಾವು ಅವರಿಗೆ ಉತ್ತರದಲ್ಲಿ ತಿಳಿಸಿದ್ದೇವೆ. ಅನಧಿಕೃತವಾಗಿರತಕ್ಕಂಥ ಸಾರಾಯಿ ಅಂಗಡಿಗಳಿವೆ ಎನ್ನುವುದ ಸರ್ಕಾರದ ಗಮನಕ್ಕೆ ಬಂದರೆ ಅವುಗಳನ್ನು ತಕ್ಷಣ ಮುಚ್ಚುವಂಥ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ ಎಂದು ನಾವು ಹೇಳಿದ್ದೇವೆ. ಮತ್ತು ತೆಗೆದುಕೊಂಡಿದ್ದೇವೆ. ನಾನು ಮೊದಲೇ ಹೇಳಿದ ಹಾಗೆ, ಮಾಲೂರು ತಾಲ್ಲೂಕಿನಲ್ಲಿ 5 ಕಡೆಗಳ್ಲಿ ಅನಧಿಕೃತ ಅಂಗಡಿಗಳಿರತಕ್ಕಂಥಾದ್ದು

ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಅವುಗಳನ್ನು ಮುಚ್ಚಿದ್ದೇವೆ. ಇನ್ನೇನಾದರೂ ನಮ್ಮ ಗಮನಕ್ಕೆ ಬಂದರೆ, ಖಂಡಿತವಾಗಿಯೂ ಕೂಡ ಇಲ್ಲೀಗಲ್ ಆಗಿರತಕ್ಕಂಥ, ಅಕ್ರಮವಾಗಿರತಕ್ಕಂಥ ಎಲ್ಲಾ ಅರ್ಯಾಕ್ ಶಾಪ್‌ಗಳನ್ನು ಕ್ಲೋಸ್ ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ನಾನು ಮಾನ್ಯ ಸದಸ್ಯರಿಗೆ ಕೊಡುತ್ತಿದ್ದೇನೆ.

ಇನ್ನು, ವಿರೋಧ ಪಕ್ಷದ ಉಪನಾಯಕರಾದ ಮಾನ್ಯ ಕಾರಜೋಳರವರು, ಹರಿಜನ ಕೇರಿಗಳಲ್ಲಿರತಕ್ಕಂಥ, ದೇವಸ್ಥಾನಗಳು ಹಾಗೂ ಶಾಲಾಕಾಲೇಜುಗಳ ಪಕ್ಕದಲ್ಲಿರತಕ್ಕಂಥ ಅರ್ಯಾಕ್ ಶಾಪ್‌ಗಳನ್ನು ತೆಗೆಯಬೇಕು ಎಂದು ಹೇಳಿದ್ದಾರೆ. ಈಗ ಆ ರೀತಿ ಯಾವುದೇ ಶಾಪ್‌ಗಳಿಲ್ಲ. ಆದರೆ ತಮ್ಮ ಗಮನಕ್ಕೆ ಬಂದ ಅಂತಹ ವಿಚಾರಗಳನ್ನು ನಮಗೆ ತಿಳಿಸಿದರೆ, ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಮಾಮೂಲನ್ನು ಫಿಕ್ಸ್ ಮಾಡಿಕೊಂಡಿದ್ದಾರೆ ಎಂದು ಹೇಳಿದರು. ಅದು ನಮ್ಮ ಗಮನಕ್ಕೆ ಬಂದಿಲ್ಲ. ಒಂದು ಪಕ್ಷ ಆ ರೀತಿ ಇದ್ದರೆ ಹೇಳಿ. ಖಂಡಿತವಾಗಿಯೂ ಅದನ್ನು ಸರಿಪಡಿಸುತ್ತೇವೆ. ಹರಿಜನಕೇರಿ ಮತ್ತು ದೇವಸ್ಥಾನಗಳ ಪಕ್ಕದಲ್ಲಿರುವಂಥ ಅಂಗಡಿಗಳನ್ನು ತೆಗೆದುಹಾಕಲೂ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಇನ್ನು, ಮಾನ್ಯ ಜ್ಞಾನೇಂದ್ರರವರು, ಹನ್ನೊಂದೂವರೆ ಬೆಲೆ ಇರತಕ್ಕಂಥ ಸ್ಯಾಚೆಟ್ಟನ್ನು 12 ರೂಪಾಯಿ ಎಂದು ಬೋರ್ಡ್ ಹಾಕಿದ್ದಾರೆ. ಅದನ್ನು 12 ರೂಪಾಯಿಗೆ ಮಾರಾಟ ಮಾಡುತ್ತಿದ್ದಾರೆ. 100 ಎಂ ಎಲ್ ಗೆ 50 ಪೈಸೆ ಜಾಸ್ತಿ ತೆಗೆದುಕೊಳ್ಳುತ್ತಿದ್ದಾರೆ ಎಂದು ಹೇಳಿದರು. ಸರ್ಕಾರ ಏನು ದರವನ್ನು ನಿಗದಿ ಮಾಡಿದೆ, ಅದಕ್ಕಿಂತ ಜಾಸ್ತಿ ತೆಗೆದುಕೊಳ್ಳುವುದಕ್ಕೆ ಅವಕಾಶವಿಲ್ಲ. ತೆಗೆದುಕೊಂಡಿದ್ದರೆ. ಅಂಥವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಬಹಿರಂಗವಾಗಿ ಎಲ್ಲಾ ಕಡೆಗಳಲ್ಲಿ ಬೋರ್ಡ್ ಇದೆ. ನಿಮ್ಮ ಇಲಾಖೆಯವರೇ ಸೇರಿಕೊಂಡು ಅದನ್ನು ಮಾಡುತ್ತಿದ್ದಾರೆ.

SRI. P.G.R. SINDHIA : We will take action.

ಅಧ್ಯಕ್ಷರು : ಆಯಿತು, ಈಗ ಮುಂದಿನ ಪ್ರಶ್ನೆ, ಸಿಂಧೂರ ಜಿ ರಾಜಶೇಖರರವರು.

ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡ : ಮಾನ್ಯ ಅಧ್ಯಕ್ಷರೇ, ಉಪ ಪ್ರಶ್ನೆ ಕೇಳಲು ನನಗೆ ಎರಡು ನಿಮಿಷ ಅವಕಾಶ ಕೊಡಿ. ಏಕೆಂದರೆ, ಹುಬ್ಬಳ್ಳಿಯ ಪಕ್ಕದಲ್ಲಿರುವವರು ನಾವು.

ಅಧ್ಯಕ್ಷರು : ಈಗಾಗಲೇ ಬಹಳ ಹೊತ್ತಾಯಿತು. ತಾವು ಕುಳಿತುಕೊಳ್ಳಿ.

ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡ : ದಯಮಾಡಿ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ಈಗಾಗಲೇ ಬಹಳ ಹೊತ್ತಾಯಿತು. ತಾವು ಕುಳಿತುಕೊಳ್ಳಿ. ಶ್ರೀ ಸಿದ್ಧನಗೌಡ ಚಿಕ್ಕನಗೌಡ ಈಶ್ವರಗೌಡ ದಯಮಾಡಿ ಎರಡು ನಿಮಿಷ ಅವಕಾಶಕೊಡಿ, ಏಕೆಂದರೆ ಹುಬ್ಬಳ್ಳಿಯ ಪಕ್ಕದಲ್ಲಿರುವವರು ನಾವು ಉಪ ಪ್ರಶ್ನೆ ಕೇಳುತ್ತೇನೆ ಎಂದು ಎಲ್ಲರೂ ನಿಂತುಕೊಂಡು, ಒಂದೇ ಊರಿನಲ್ಲಿ ಮಾತನಾಡಿದರೆ ನಾವು ಯಾರನ್ನು ಕರೆಯೋಣ, ಯಾರನ್ನು ಬಿಡೋಣ?

ಶ್ರೀ ಸಿದ್ದನಗೌಡ ಚಿಕ್ಕನಗೌಡ ಈಶ್ವರಗೌಡ : ದಯಮಾಡಿ ಎರಡು ನಿಮಿಷ ಅವಕಾಶ ಕೊಡಿ. ಎರಡು ನಿಮಿಷಗಳಲ್ಲಿ ಮುಗಿಸಿಬಿಡುತ್ತೇನೆ. ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನನ್ನ ಕ್ಷೇತ್ರ ಹುಬ್ಬಳ್ಳಿ ಪಕ್ಕದಲ್ಲಿ ಇದೆ. ಅಲ್ಲಿ ಅಬಕಾರಿಯವರು ಚೆಕ್‌ಪೋಸ್ಟನ್ನು

ಮಾಡಿದ್ದಾರೆ. ತಮ್ಮ ಇಲಾಖೆಯವರು ಎನು ಮಾಡಿದ್ದಾರೆಂದರೆ, ಕೆಲವು ಡಾಬಾಗಳನ್ನು, ಅಂಗಡಿಗಳನ್ನು ಗುರುತು ಮಾಡಿಕೊಂಡಿದ್ದಾರೆ. ಚೆಕ್‌ಪೋಸ್ಟಿಗೆ ಬರುವಂಥ ಟಿಪ್ಪರ್‌ಗಳು ಮತ್ತು ಆಟೋರಿಕ್ಷಾದವರಿಗೆ ಅವರು ಏನು ಹೇಳುತ್ತಾರೆಂದರೆ, ನಾವು ಏನು ಕೊಡುತ್ತೇವೆ, ಅದನ್ನು ನೀವು ನಮ್ಮ ಗಾಡಿಗಳಲ್ಲಿ ಹಾಕಿಕೊಂಡು ಹೋಗಿ ಇಂಥ ಡಾಬಾಗಳಿಗೆ ಕೊಡಬೇಕು, ಇಂಥ ಅಂಗಡಿಗಳಿಗೆ ಕೊಡಬೇಕೆಂದು ಹೇಳುತ್ತಾರೆ. ಒಂದು ಗ್ರಾಮದಲ್ಲಿ ಲೈಸನ್ಸ್ ಹೊಂದಿರತಕ್ಕಂಥ ಎರಡು ಮೂರು ಅಂಗಡಿಗಳು ಇದ್ದರೆ, ತಮಗೆ ಬೇಕಾದಂತೆ 7–8 ಅಂಗಡಿಗಳನ್ನು ಇವತ್ತು ನಡೆಸುತ್ತಿದ್ದಾರೆ.....

(ಗೊಂದಲ)

ಅಧ್ಯಕ್ಷರು : ಏಕೆ ಹೀಗೆ ಮಾಡುತ್ತಿದ್ದೀರಿ? ಉಪ ಪ್ರಶ್ನೆಗಳನ್ನು ಕೇಳಿ ಎಂದು ಹೇಳಿದರೆ ಅದು ಬಿಟ್ಟು ಹೀಗೆ ಭಾಷಣ ಮಾಡಿದರೆ ಹೇಗೆ?

ಶ್ರೀ ಈಶ್ವರಗೌಡ್ರು ಚಿಕ್ಕನಗೌಡ ಸಿದ್ದನಗೌಡ : ತಾವು ಬೇಡ ಎಂದು ಹೇಳಿದರೆ ನಾವು ಹೋಗಿಬಿಡ್ತೀವಿ.

ಅಧ್ಯಕ್ಷರು : ಹೋಗಿ. ನೀವು ಮಾತನಾಡುವುದು ಏನಿದು? ಉಪ ಪ್ರಶ್ನೆ ಕೇಳಿ ಎಂದರೆ ಪ್ರಶ್ನೆ ಕೇಳದೆ ಭಾಷಣ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಈಶ್ವರಗೌಡ್ರ ಚಿಕ್ಕನಗೌಡ ಸಿದ್ದನಗೌಡ : ಮಾನ್ಯ ಅಧ್ಯಕ್ಷರೆ, ಕಳೆದ 25 ದಿವಸಗಳಿಂದ ಈ ಬಗ್ಗೆ Zero Hour ನಲ್ಲಿ ಮಾತನಾಡಬೇಕೆಂದರೆ ಅವಕಾಶ ಸಿಗಲಿಲ್ಲ. ಈಗಲಾದರೂ ಈ ಬಗ್ಗೆ ಹೇಳೋಣವೆಂದರೆ ಈಗಲೂ ಅವಕಾಶ ಕೊಡದಿದ್ದರೆ ಹೇಗೆ?

ಅಧ್ಯಕ್ಷರು : ಕೇಳಿ. ಆದರೆ ಭಾಷಣ ಮಾಡಬೇಡಿ. ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಈಶ್ವರಗೌಡ್ರ ಚಿಕ್ಕನಗೌಡ ಸಿದ್ದನಗೌಡ : ನಾನು ಮಾನ್ಯ ಮಂತ್ರಿಗಳಿಗೆ ಏನು ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ಇರುವಂಥ ಟೆಂಪೋದವರಿಗೆ, ಆಟೋದವರಿಗೆ ತಮ್ಮ ಇಲಾಖೆಯವರು ತೊಂದರೆ ಕೊಡುತ್ತಿದ್ದಾರೆ. ಇದನ್ನು ತೆಗೆದುಕೊಂಡು ಹೋಗಿ ಡಾಬಾದವರಿಗೆ ಕೊಡಿ ಎಂದು ಡ್ರೈವರ್‌ಗಳಿಗೆ ಹೇಳುತ್ತಾರೆ. ಅಕಸ್ಮಾತ್ ಆ ಡ್ರೈವರ್‌ಗಳು ತೆಗೆದುಕೊಂಡು ಹೋಗಿ ಕೊಡಲಿಲ್ಲವೆಂದರೆ ಆಟೋವನ್ನು ಹಿಡಿದು ಸ್ಟೇಷನ್‌ಗೆ ತೆಗೆದುಕೊಂಡು ಹೋಗುತ್ತಾರೆ. ನಮ್ಮ ತಾಲ್ಲೂಕಿನ ಗಾಡಿಗಳನ್ನು ವಾಪಸ್ಸು ತೆಗೆದುಕೊಳ್ಳುವ ವೇಳೆಗೆ ಮೂರು ಮೂರು ತಿಂಗಳ ತನಕ ಅಲ್ಲಿಯೇ ಬಿದ್ದಿರುತ್ತದೆ. ಅಂದರೆ ಡ್ರೈವರ್‌ಗಳು ಡಾಬಾಗಳಿಗೆ ತೆಗೆದುಕೊಂಡು ಹೋಗಿ ಕೊಡದಿದ್ದರೆ ಆ ಗಾಡಿಗಳ ಮೇಲೆ ಕೇಸ್ ಹಾಕುತ್ತಾರೆ. ಹುಬ್ಬಳ್ಳಿಯಲ್ಲಿ ಪ್ಯಾಸೆಂಜರ್ ಹತ್ತಿ ಬರುವಂಥ ಗಾಡಿಗಳಲ್ಲಿ ಡೀಸೆಲ್ ತುಂಬಿರುತ್ತದೆ. ಡೀಸೆಲ್ ತುಂಬಿರುವಂಥ ಗಾಡಿಯನ್ನು ಹಿಡಿದು ಮೂರು ಮೂರು ತಿಂಗಳು ನಾಲ್ಕು ನಾಲ್ಕು ತಿಂಗಳು ಗಟ್ಟಲೆ ಬಡವರ ಗಾಡಿಗಳನ್ನು ಠಾಣೆಗಳಲ್ಲಿ ಇಟ್ಟಿರುತ್ತಾರೆ. ಅದಕ್ಕೆ ತಾವು ದಯಮಾಡಿ ಧಾರವಾಡ ರಸ್ತೆ ಮತ್ತು ಹುಬ್ಬಳ್ಳಿ ಕೂಡು ರಸ್ತೆಗೆ ತಾವು ಆದೇಶ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕೈಗಾರಿಕೆ ಮತ್ತು ವಾಣಿಜ್ಯ ಸಚಿವರು) (ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರ ಪರವಾನಗಿ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಚಿಕ್ಕನಗೌಡ್ರು ಒಂದು ವಿಚಾರ ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಮ್ಮ ಕೆಳಮಟ್ಟದಲ್ಲಿರತಕ್ಕಂಥ ಕೆಲವು ಅಧಿಕಾರಿಗಳು misuse ಮಾಡಿಕೊಂಡು ಇರತಕ್ಕಂಥ ಕಾನೂನನ್ನು ಆಟೋರಿಕ್ಷಾದವರಿಗೆ

ಮೆಟಡೋರ್ ವ್ಯಾನ್‌ಗಳವರಿಗೆ ಇಂಥ ಕಡೆ Supply ಮಾಡಬೇಕು. ಇಲ್ಲದಿದ್ದರೆ ತೊಂದರೆ ಕೊಡುತ್ತಾರೆ. ಕೇಸ್ ಹಾಕುತ್ತಾರೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ನಾನು ಅಧಿಕಾರಿಗಳಿಗೆ ಹೇಳಿ ಅದರ ಸೂಚನೆ ಕೊಟ್ಟು ಅವರ ಮೂಲಕ ಅದನ್ನು ನಾನು ತಪಾಸಣೆ ಮಾಡಿ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಎನ್. ಕೃಷ್ಣಯ್ಯಶೆಟ್ಟಿ : ಮಾನ್ಯ ಅಧ್ಯಕ್ಷರೆ, ಸರ್ಕಾರದ ಉತ್ತರ ನನಗೆ ಸಮಾಧಾನವಾಗಲಿಲ್ಲ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ. ಈ ಪ್ರಶ್ನೆಗೆ ಬಹಳ ಸಮಯ ತೆಗೆದುಕೊಳ್ಳಲಾಗಿದೆ.

ಶ್ರೀ ಎಸ್.ಎನ್. ಕೃಷ್ಣಯ್ಯಶೆಟ್ಟಿ : ಕೇವಲ 5 ಅಂಗಡಿ ಎಂದು ಹೇಳುತ್ತಿದ್ದಾರಲ್ಲಾ. ನಮಗೆ ತಪ್ಪು ಮಾಹಿತಿ ಕೊಡುತ್ತಿದ್ದಾರಲ್ಲಾ. ಸರ್ಕಾರದ ಅಧಿಕಾರಿಗಳು ಸರ್ಕಾರಕ್ಕೆ ತಪ್ಪು ಮಾಹಿತಿ ಕೊಡುತ್ತಿರುವುದನ್ನು ಸರಿಯಾಗಿ ಸರ್ಕಾರ ಗಮನಿಸುವುದೇ ಇಲ್ಲವೆಂದು ತೋರುತ್ತದೆ. ಕೇವಲ 5 ಅಂಗಡಿಗಳನ್ನು ಮುಚ್ಚಿದ್ದೇವೆಂದು ಹೇಳುತ್ತಾರೆ. ಇಂಥ 400 ಕ್ಕಿಂತ ಹೆಚ್ಚು ಅಂಗಡಿಗಳಿವೆ. ಇದರಿಂದ ಬಹಳಷ್ಟು ಜನ ಸಾಯುತ್ತಿದ್ದಾರೆ. ವಿಷ ಕುಡಿದು ಸಾಯುತ್ತಿದ್ದಾರೆ. ಇದು ಬಹಳ ಗಂಭೀರವಾದಂಥ ವಿಷಯವಲ್ಲವೇ? ಈ ಮದ್ಯ ಕುಡಿದು ರಾಜ್ಯದಲ್ಲಿ ಎಷ್ಟು ಜನರು ಸಾಯುತ್ತಿದ್ದಾರೆನ್ನುವುದನ್ನು ನೋಡುತ್ತಿದ್ದೇವೆ. ದಯವಿಟ್ಟು ಅದನ್ನು ಸರಿಯಾದ ರೀತಿಯಲ್ಲಿ ಪರಿಶೀಲನೆ ಮಾಡಿ. ಅಲ್ಲಿ ನಾಲ್ಕೈದು ತಾಲ್ಲೂಕುಗಳಿಗೆ ಒಬ್ಬನೇ ಅಧಿಕಾರಿ ಇದ್ದಾರೆ. ಆತ ಒಂದು ತಿಂಗಳಿಗೆ ಒಂದು ಸಲ ಸಹ ಬರುವುದಿಲ್ಲ. ಜೊತೆಗೆ ತಪ್ಪು ಮಾಹಿತಿಯನ್ನು ಸಹ ಸರ್ಕಾರಕ್ಕೆ ಅಧಿಕಾರಿಗಳು ಕೊಟ್ಟಿದ್ದಾರೆ. ಕೇವಲ 5 ಅಂಗಡಿಗಳು ಎಂದು ಹೇಳಿದರೆ, ಅಲ್ಲಿಂದ ತಾವು ಒಂದು intelligence report ತೆಗೆದುಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಕೃಷ್ಣಯ್ಯಶೆಟ್ಟಿಯವರೆ, ಪ್ರಶ್ನೆಗಳನ್ನು ನೀವು ಕೇಳಿ ಎಂದರೆ ನೀವು ಅಲ್ಲಿಯ ಕಥೆಯನ್ನೆಲ್ಲಾ ಹೇಳುತ್ತಿದ್ದೀರಿ. ಉಪ ಪ್ರಶ್ನೆಗಳನ್ನು ಕೇಳಿ ಎಂದರೆ ನೀವು ಕಥೆ ಹೇಳುತ್ತೀರಿ. ಇನ್ನು ಸಹ ಉಪ ಪ್ರಶ್ನೆಗಳನ್ನು ಕೇಳುವ ರೀತಿ ನಿಮಗೆ ಗೊತ್ತಾಗುತ್ತಿಲ್ಲ! ಹೀಗೆ ಮಾಡಿದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಾನು ಗೌರವಾನ್ವಿತ ಸಚಿವರಿಗೆ ಮತ್ತೊಮ್ಮೆ ಒತ್ತಿ ಭರವಸೆಯನ್ನು ಕೊಡುತ್ತಿದ್ದೇನೆ. ಯಾವುದೇ ಕಾರಣಕ್ಕೂ ಸಹಿತ ಅಕ್ರಮವಾಗಿ ಇರತಕ್ಕಂಥ ಅಂಗಡಿಗಳು ನಮ್ಮ ಇಲಾಖೆಯ ಗಮನಕ್ಕೆ ಬಂದರೆ ನಾವು ಅದನ್ನು ಮುಚ್ಚುತ್ತೇವೆ. ಈಗಾಗಲೇ ಮುಚ್ಚಿದ್ದೇವೆ. ಸರ್ಕಾರಕ್ಕೆ ಮತ್ತು ನಮ್ಮ ಇಲಾಖೆಗೆ ಬದ್ಧತೆ ಇದೆ.

ಸವಣೂರು ತಾಲ್ಲೂಕಿನಲ್ಲಿರುವ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು

622(6544) ಶ್ರೀ ಸಿಂಧೂರ ಜಿ. ರಾಜಶೇಖರ(ಶಿಗ್ಲಾಂವ್) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿಯೇ ಸವಣೂರ ತಾಲ್ಲೂಕಿನ ಜಿಲ್ಲಾ ಮುಖ್ಯ ರಸ್ತೆಗಳ ಉದ್ದ ಅತೀ ಕಡಿಮೆ ಅಂದರೆ ಕೇವಲ 26 ಕಿಮೀ. ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಹಳ್ಳಿ ರಸ್ತೆಗಳನ್ನು ಜಿಲ್ಲಾ ಮುಖ್ಯ ರಸ್ತೆಗಳನ್ನಾಗಿ ಪರಿವರ್ತಿಸಿ–ಉದ್ದವನ್ನು ಹೆಚ್ಚಿಸಲು ಸರ್ಕಾರ ಯಾವ ಯೋಜನೆಯನ್ನು ಹಾಕಿಕೊಂಡಿದೆ;

ಇ) ಹಾಗಿದ್ದಲ್ಲಿ, ಪ್ರಸಕ್ತ ಸಾಲಿನ ಆಯವ್ಯಯದ ಅನುದಾನದಲ್ಲಿ ಈ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಅನುದಾನ ಬಿಡುಗಡೆಗೊಳಿಸಿ ಸರ್ಕಾರ ಕ್ರಮ ಕೈಗೊಳ್ಳುವುದೇ;